ಆ) ಹಾಗಿದ್ದಲ್ಲಿ, ಯು.ಜಿ.ಡಿ. ಸರ್ವೆ ಕಾರ್ಯವು ಮುಗಿದಿದೆಯೇ;

ಇ) ಹಾಗಿದ್ದಲ್ಲಿ, ಯು.ಜಿ.ಡಿ. ಸರ್ವೆ ಕಾರ್ಯಕ್ಕಾಗಿ ಸರ್ಕಾರ ನಿಗದಿಪಡಿಸಿದ್ದ ಮೊತ್ತವೆಷ್ಟು;

ಈ) ಯು.ಜಿ.ಡಿ., ನಿರ್ಮಾಣಕ್ಕೆ ಸರ್ಕಾರ ನಿಗಧಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಉ) ಯು.ಜಿ.ಡಿ. ನಿರ್ಮಾಣ ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು.

ಊ) ಯು.ಜಿ.ಡಿ. ನಿರ್ಮಾಣದ ಕಾಮಗಾರಿಗೆ ಬಿಡುಗಡೆಯಾದ ಮತ್ತು ವೆಚ್ಚವಾದ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು);

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) – ಇದೆ –

ಆ) ಸರ್ವೆ ಕಾರ್ಯ ಮುಗಿದಿದೆ.

ಇ) ಸರ್ವೆ ಕಾರ್ಯಕ್ಕೆ ರೂ.4.00 ಲಕ್ಷಗಳನ್ನು ಗುಬ್ಬಿ ಪಟ್ಟಣ ಪಂಚಾಯಿತಿಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪಾವತಿಸಿರುತ್ತದೆ.

ಈ) ಮತ್ತು ಉ) ವಿನ್ಯಾಸ ಹಾಗೂ ವಿವರವಾದ ಅಂದಾಜು ಪಟ್ಟಿಯೊಂದಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಸರ್ಕಾರಕ್ಕೆ ಆಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿದ ನಂತರ ಆದ್ಯತೆಮೇರೆಗೆ ಆದೇಶ ಹೊರಡಿಸಿ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಊ) ಯಾವುದೇ ಹಣ ಬಿಡುಗಡೆಯಾಗಿಲ್ಲ ಮತ್ತು ವೆಚ್ಚವಾಗಿಲ್ಲ.

823 ಶ್ರೀ ರಮಾನಾಥ್ ರೈ.ಬಿ (ಬಂಟ್ವಾಳ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆಯಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಇದ್ದಲ್ಲಿ, ಇದನ್ನು ನೀಗಿಸಲು 2ನೇ ಹಂತದ ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿದೆ?

ಇ) ಶೀಘ್ರ ಪರಿಹಾರ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ಹೌದು, ಬೇಸಿಗೆಯ ನಾಲ್ಕು ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ.

ಆ) 2ನೇ ಹಂತದ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ ರೂ.42.50 ಕೋಟಿ ಇದ್ದು. ಪ್ರಾಥಮಿಕ ಪ್ರಸ್ತಾವನೆಯ ಯೋಜನಾ ವರದಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ತಯಾರಿಸಲಾಗಿದೆ.

ಇ) ಪುರಸಭೆ ಕೋರಿಕೆಯಂತೆ ಬಂಟ್ವಾಳ ಪಟ್ಟಣಕ್ಕೆ ಹಾಲಿ ಇರುವ ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಯೋಜನೆಯನ್ನು ತಯಾರಿಸಿ ಪ್ರಸ್ತಾವಿಸಲಾಗಿರುತ್ತದೆ. ಪುರಸಭೆಯ ಅನುಮೋದನೆ ನಂತರ ಸರ್ವೆ ಕಾರ್ಯ, ಡಿಪಿಆರ್ ಸಿದ್ದಪಡಿಸುವಿಕೆ, ಕನ್ಸಲ್‌ಟೆಂಟ್‌ಗಳ ನೇಮಕಾತಿ ಇತ್ಯಾದಿಗೆ ಉಪಕ್ರಮಿಸಲಾಗುವುದು.

355 ಶ್ರೀ ಮಲ್ಲಿಕಾ ಪ್ರಸಾದ್ (ಪುತ್ತೂರು) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಪ ವಿಭಾಗ ಕೇಂದ್ರವಾಗಿ ಪುತ್ತೂರಿನಲ್ಲಿ ಮಿನಿ ವಿಮಾನ ನಿಲ್ದಾಣ ನಿರ್ಮಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಮಿನಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಎಂದಿನಿಂದ ನಿರ್ಮಿಸಲಾಗುವುದು?